# ಶಿವಮಯ

ಭಾರತೀಯ ಪರಂಪರೆಯಲ್ಲಿ ಶಿವನದು ಅತ್ಯಂತ ಪ್ರಸಿದ್ಧವಾದ ಹೆಸರು. ಇವನು ರಾಮನಂತೆ ಏಕಪತ್ನಿ ವ್ರತಸ್ಥನಲ್ಲ. ಕೃಷ್ಣನಂತೆ ಕಪಟನಾಟಕ ಸೂತ್ರಧಾರಿಯೂ ಅಲ್ಲ. ತ್ರಿಮೂರ್ತಿಗಳಲ್ಲಿ ಒಬ್ಬನಾಗಿ ಲಯಕರ್ತನೆನಿಸಿಕೊಂಡವನು. ಸೃಷ್ಟಿಯ ಆದಿಯಲ್ಲಿ ಶಿವನ ವಾಮಾಂಗದಿಂದ ಜನಿಸಿದವನು ವಿಷ್ಣು. ಬ್ರಹ್ಮ ವಿಷ್ಣುವಿನ ನಾಭಿಕಮಲದಿಂದ ಜನಿಸಿದವನು.

ಬ್ರಹ್ಮನಿಗೆ ಪಂಚಮುಖಗಳಿದ್ದು ತಾನೇ ಶ್ರೇಷ್ಠನೆಂದು ಗರ್ವದಿಂದ ಮೆರೆಯುತ್ತಿದ್ದಾಗ ಶಿವ ಅವನ ಒಂದು ತಲೆಯನ್ನು ಕತ್ತರಿಸಿ ಚತುರ್ಮುಖನನ್ನಾಗಿ ಮಾಡುತ್ತಾನೆ. ಬ್ರಹ್ಮ ಕಪಾಲವು ಕೈಗೆ ಅಂಟಿಕೊಂಡು ಕಾಪಾಲಿಕನೆಂಬ ಹೆಸರನ್ನು ಸಹ ಅವನು ಪಡೆದಿದ್ದಾನೆ. ಸುರ ಅಸುರರು ಅಮೃತಕ್ಕಾಗಿ ಸಮುದ್ರ ಮಥನ ನಡೆಸಿದಾಗ ಉದ್ಭವಿಸಿದ ವಿಷ ಕುಡಿದು ವಿಷಕಂಠನೆನಿಸಿಕೊಂಡಿದ್ದಾನೆ. ಪಾರ್ವತಿಯ ಪತಿಯಾಗಿ ಪಾರ್ವತೀಶ, ಗಂಗೆಯ ಪತಿಯಾಗಿ ಗಂಗಾಧರ, ಕೈಲಾಸದ ಒಡೆಯನಾಗಿ ಕೈಲಾಸಪತಿ ಹೀಗೆ ಅಸಂಖ್ಯಾತ ನಾಮಧೇಯಗಳನ್ನು ಉಳ್ಳ ದೈವವೆಂದರೆ ಶಿವನೊಬ್ಬನೇ ಆಗಿದ್ದಾನೆ. ಭಾರತೀಯರ ಜನಜೀವನದಲ್ಲಿ ಶಿವ ಬೆರೆತುಹೋದಷ್ಟು ಇತರ ದೈವಗಳು ಬೆರೆತ ಹಾಗೆ ಕಂಡುಬರುವುದಿಲ್ಲ.

ಹಿಮಾಲಯದ ಹಿಮಗಿರಿಯ ಮೇಲೆ ಅವನ ಕೈಲಾಸವೆಂಬ ಮನೆ. ಆ ಕೈಲಾಸದಲ್ಲಿ ಗಣಾಧಿಪತಿಗಳು, ಗಣಸಮೂಹದ ನಡುವೆ ಪತ್ನಿ ಪುತ್ರರ ಸಹಿತ ಕುಟುಂಬಸ್ಥ ದೈವವಾಗಿ ಜನಮಾನಸದಲ್ಲಿ ಸಾಕಾರಗೊಂಡಿದ್ದಾನೆ. ಕೇವಲ ಪತ್ನಿ, ಪುತ್ರರಿಗೆ ಮಾತ್ರ ಅವನು ಸೀಮಿತವಲ್ಲ. ಅವನಿಗೆ ಭಕ್ತಜನರೆಂಬ ಮತ್ತೊಂದು ದೊಡ್ಡ ಸಂಸಾರವೂ ಇದೆ. ಕಾಲ, ಕಾಲಕ್ಕೆ ತನ್ನನ್ನು ಆರಾಧಿಸುವ ಅವರ ಕ್ಷೇಮ ಚಿಂತನೆ, ಲೌಕಿಕ ಕಷ್ಟಗಳಿಂದ ಮುಕ್ತಿ ಕೊಡಿಸುವ ಜವಾಬ್ದಾರಿಯನ್ನು ಸಹ ಹೊತ್ತುಕೊಂಡಿದ್ದಾನೆ. ಹೀಗಾಗಿ ಕೈಲಾಸನಾಥನಾದರೂ ಅವನ ಕಣ್ಣು ಭೂಮಿಯ ಮೇಲಿನ ಭಕ್ತರ ಮೇಲೆಯೇ. ಭಕ್ತಿಯ ಮಾರ್ಗದಲ್ಲಿರುವ ಭಕ್ತರ ಜೀವನ ಮಾಗುತ್ತಾ ಬರಲು ಅವರನ್ನು ನಾನಾ ರೀತಿಯಲ್ಲಿ ಪರೀಕ್ಷಿಸುತ್ತಾ ಅದರಲ್ಲಿ ಅವರು ಗೆದ್ದರೆ ತನ್ನ ಗಣಸಮೂಹದಲ್ಲಿ ಸೇರಿಸಿಕೊಳ್ಳುತ್ತಾನೆ. ಭಾರತೀಯರ ಆಧ್ಯಾತ್ಮಿಕ ನಂಬಿಕೆಗಳಲ್ಲಿ ಮುಕ್ತಿ, ಮೋಕ್ಷದ ಕಲ್ಪನೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಮನುಷ್ಯ ಸತ್ತ ಮೇಲೆ ಅವನ ದೇಹ ಮಣ್ಣಿನಲ್ಲಿ ಲಯವಾದರೆ ಆತ್ಮ ಸ್ವರ್ಗಕ್ಕೆ ಹೋಗುತ್ತದೆ ಎಂಬ ನಿರೀಕ್ಷೆಗಳಿವೆ.

ಪಾಪ ಕರ್ಮಗಳನ್ನು ಮಾಡಿದವನಾದರೆ ಅವನಿಗೆ ನರಕ ಕಟ್ಟಿಟ್ಟ ಬುತ್ತಿ. ಹೀಗಾಗಿ ಎಲ್ಲ ಆಸ್ತಿಕರ ನಿರೀಕ್ಷೆ ಸ್ವರ್ಗಕ್ಕೆ ಹೋಗುವುದಾಗಿದೆ. ಹಿರಿಯ ಜೀವಿಗಳಾಗಿ, ಸಾರ್ಥಕತೆಯಿಂದ ಬದುಕಿ ಸತ್ತವರನ್ನು ಕೈಲಾಸವಾಸಿಗಳಾದರು ಎಂದು ಹೇಳುವ ವಾಡಿಕೆಯ ಮಾತುಗಳು ಸಹ ನಮ್ಮಲ್ಲಿ ಬಳಕೆಯಲ್ಲಿವೆ. ಭಾರತದಾದ್ಯಂತ ಶಿವನ ಭಕ್ತ ಪರಂಪರೆ ಹಿರಿದಾಗಿಯೇ ಇದೆ. ಉಳಿದೆಲ್ಲಾ ಶಿಷ್ಟ ದೇವತೆಗಳಂತೆ ಅವನು ಅರಮನೆಯಲ್ಲೋ, ಅಂತಃಪುರದಲ್ಲೋ, ದೇಗುಲದಲ್ಲೋ ವಾಸಿಸುವವನಲ್ಲ. ಕೈಲಾಸವೆಂಬುದು ಅವನ ಕೇಂದ್ರಸ್ಥಾನ. ಹಿಮಾಚ್ಛಾದಿತ ಪರ್ವತ, ಗುಹೆಗಳಲ್ಲಿ ಅವನ ವಾಸ. ಅವನ ಹೆಂಡತಿ ಪಾರ್ವತಿ ಮಕ್ಕಳ ಜೊತೆ ವಾಸಿಸಿದರೆ ಇನ್ನೊಬ್ಬ ಹೆಂಡತಿ ಗಂಗೆ ಯಾರಿಗೂ ನಿಲುಕದೆ ಸದಾಕಾಲ ಹಿಮಾಚ್ಛಾದಿತ ಪರ್ವತಗಳಲ್ಲಿ, ಗಿರಿಕಂದರಗಳಲ್ಲಿ ಲೋಕದ ವ್ಯವಹಾರದಿಂದ ದೂರಾಗಿ ಹರಿಯುವುದರಲ್ಲಿ ಮುಳುಗಿಹೋಗಿದ್ದಾಳೆ. ಉತ್ತರ ಭಾರತದ ಹೃಷಿಕೇಶ, ಗಂಗೋತ್ರಿ, ಯಮುನೋತ್ರಿ, ಕೇದಾರನಾಥ ಈ ಎಲ್ಲಾ ಪ್ರದೇಶಗಳು ಶಿವನ ಹಾಗೂ ಗಂಗೆಯ ಎಡೆಬಿಡದ ನಿರಂತರ ಸಾಂಗತ್ಯಗಳಂತೆಯೇ ತೋರುತ್ತವೆ. ಎಲ್ಲೆಂದರಲ್ಲಿ ಎತ್ತರೆತ್ತರಕ್ಕೆ ಚಾಚಿನಿಂತ ಹಿಮಪರ್ವತಗಳು ಕಣ್ಣುತುಂಬುತ್ತವೆ. ಪರ್ವತ ಸಾಲುಗಳ ನಡುವೆ ದಾರಿಮಾಡಿಕೊಂಡು ಹರಿಯುವ ಗಂಗೆ ಕೆಲವು ಕಡೆ ಧಾರೆಯೆಂಬಂತೆ, ಮತ್ತೆ ಕೆಲವು ಕಡೆ ಆವೇಶದಿಂದೆಂಬಂತೆ ಭೋರ್ಗರೆದು ಹರಿಯುತ್ತಾಳೆ. ಈ ಹರಿಯುವ ಆಟದ ಎದುರು ಶಿವ ನಿರಂತರ ಪ್ರೇಕ್ಷಕ. ಶಿವರೂಪಿ ಹಿಮಪರ್ವತಗಳು , ಹಾಲಿನ ಕಡಲಂತೆ ಹರಿಯುವ ಗಂಗೆ ಪರಸ್ಪರ ಸ್ಪರ್ಧಿಗಳಂತೆ ತೋರುತ್ತಾರೆ. ಈ ಇಬ್ಬರೂ ದಾಂಪತ್ಯದಲ್ಲಿದ್ದು ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಮುಳುಗಿ ಹೋದ ಅಸಾಮಾನ್ಯ ಪ್ರಾಕೃತಿಕ ಶಕ್ತಿಗಳಾಗಿ ಕಣ್ಣಮುಂದೆ ನಿಲ್ಲುತ್ತಾರೆ. ಅಂತರಂಗ ಬಿಟ್ಟುಕೊಡದ ಶಿವ, ಅಂತರಂಗದಲ್ಲಿ ಅಡಗಲಾರದ ಗಂಗೆ ರೂಪಕಗಳೇ ಆಗಿದ್ದಾರೆ. ಹಿಮಾಲಯದ ಆಸುಪಾಸಿನಲ್ಲಿ ಅಲ್ಲಿನ ಜನ ಶಿವ, ಪಾರ್ವತಿ ಮದುವೆಯಾದ ಸ್ಥಳ ಇದೇ ಎಂದು ದೇಗುಲವೊಂದನ್ನು ತೋರುತ್ತಾರೆ.

ಶಿವ ಗಣಪತಿಯ ಶಿರ ಕತ್ತರಿಸಿದ ಶಿರ ಕಾಟ್ ದೇಗುಲವಿದೇ ಎಂದು ಮತ್ತೊಂದನ್ನು ತೋರಿಸುತ್ತಾರೆ. ಶಿವಾಚಲ್ ಪ್ರದೇಶ್ ಹಾಗೂ ದೇವಭೂಮಿ ಎಂದೇ ಕರೆಯಲ್ಪಡುವ ಈ ಪ್ರದೇಶಗಳು ಶಿವ ನಡೆದಾಡಿದ, ತನ್ನ ಲೀಲೆಗಳನ್ನು ತೋರಿದ ಪವಿತ್ರ ಸ್ಥಳವಾಗಿದೆ ಎಂದು ಜನ ಬಲವಾಗಿ ನಂಬಿದ್ದಾರೆ. ಈ ಪ್ರದೇಶಗಳಲ್ಲಿ ಪರ್ವತ ಹತ್ತುವಾಗ ಬೂದಿ ಬಳಿದುಕೊಂಡು ಒಂಟಿಯಾಗಿ ಜೀವಿಸುವ, ಗುಹೆಗಳಲ್ಲಿಯೇ ಉಳಿದುಹೋದ ಹಲವಾರು ಸಾಧುಸಂತರು ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೆ ಕಾಣಸಿಗುತ್ತಾರೆ. ಬದುಕಿನ ಕೊನೆಯ ಘಟ್ಟದಲ್ಲಿ ಕೈಗೊಳ್ಳುವ ಚಾರ್ ಧಾಮ್ ಯಾತ್ರೆ ಎಂದೇ ಕರೆಯಲ್ಪಡುವ ಈ ಪ್ರವಾಸದಲ್ಲಿ ಮುಕ್ತಿಗಾಗಿ, ಮೋಕ್ಷಕ್ಕಾಗಿ ಹಂಬಲಿಸುವವರು ಹಲವರಿದ್ದಾರೆ. ಸ್ವರ್ಗದಲ್ಲಿ ನೆಲೆಗೊಂಡಿದ್ದ ಗಂಗೆಯನ್ನು ಭಗೀರಥ ತನ್ನ ಅವಿರತ ಪ್ರಯತ್ನದಿಂದ ಭೂಮಿಗೆ ಕರೆತಂದ. ತನ್ನ ವಂಶದ ಅರವತ್ತು ಸಾವಿರ ಪಿತೃಗಳು ಕಪಿಲ ಋಷಿಯ ಶಾಪ ಸಹಿ ಸುಟ್ಟು ಬೂದಿಯಾದಾಗ ತನ್ನ ಹಿರಿಯರಿಂದಾಗದ ಮೋಕ್ಷದ ಪ್ರಯತ್ನವನ್ನು ಭಗೀರಥ ಆಗುಮಾಡುತ್ತಾನೆ. ಪಿತೃಗಳ ಮುಕ್ತಿಗಾಗಿ ಕಠೋರ ತಪಸ್ಸು ಮಾಡಿ ಭೂಮಿಗೆ ಬರಲೊಲ್ಲದ ಗಂಗೆಯನ್ನು ಶಿವನ ಕರುಣೆಯಿಂದ ಕರೆತರುತ್ತಾನೆ. ಗಂಗೆ ಸ್ವರ್ಗದಿಂದ ಭೂಮಿಗೆ ಧುಮುಕಿದ ಜಾಗವನ್ನು ಗಂಗೋತ್ರಿ ಎನ್ನಲಾಗಿದೆ. ಇಲ್ಲಿಯೇ ಗಂಗೆ ಹರಿವ ಪಥದಲ್ಲಿ ಭಗೀರಥನ ಒಂದು ಮೂರ್ತಿಯನ್ನು ನಿಲ್ಲಿಸಲಾಗಿದೆ. ಭಗೀರಥ ತನ್ನ ಪೂರ್ವಿಕರಿಗೆ ಮುಕ್ತಿ ಕೊಟ್ಟ ಜಾಗದಲ್ಲಿಯೇ ಆಸ್ತಿಕ ಮನೋಭಾವದವರು ತಮ್ಮ ಹಿರಿಯರಿಗೆ ತರ್ಪಣ ಕೊಡುವ, ಮುಕ್ತಿ ಕೊಡಿಸುವ ಕಾರ್ಯಗಳನ್ನು ಮಾಡುತ್ತಾರೆ. 'ಭಗೀರಥ ಪ್ರಯತ್ನ' ಎಂಬ ನಾಣ್ನುಡಿಗೆ ಪ್ರೇರಕನಾದ ಭಗೀರಥ ಶಿವ ಮತ್ತು ಗಂಗೆಯರೆಂಬ ಆದಿಮ ದಂಪತಿಗಳ ಕರುಣೆಗೆ ಪಾತ್ರನಾದ ಕಾರಣಿಕ ಶಿಶುವೆಂಬಂತೆ ತೋರುತ್ತಾನೆ.

■ **ಅಮೃತಮತಿ**

## ಮಾತೇ ಮುತ್ತು

- ಶ್ರದ್ಧೆ ಪರ್ವತವನ್ನೇ ಚಲಿಸಬಲ್ಲದು ಎನ್ನುವುದಾದರೆ ಪ್ರೇಮದ ಶಕ್ತಿಯೇನು ಕಡಿಮೆಯೇ?
  —ಫೇಬರ್
- ಪಾಪದಿಂದ ಪಾರಾಗಲು ಸಾವಿನ ನೆನಪನ್ನೂ ಸದಾ ಇಟ್ಟುಕೊಂಡಿರುವುದೇ ಶ್ರೇಷ್ಠ ಉಪಾಯ.
  —ವಿನೋಬಾ ಭಾವೆ
- ಯಾವುದು ಭಯವನ್ನು ಹುಟ್ಟಿಸುವುದೋ ಅದರ ಮೇಲೆ ಪ್ರೀತಿಯೂ ಹುಟ್ಟಲಾರದು.
  —ಅರಿಸ್ಟಾಟಲ್
- ನಾನು ಬಡವ ಎಂಬ ಮನೋಭಾವ ಇರುವವರು ಮಾತ್ರವೇ ಬಡವರು.
  —ಎಮರ್ಸನ್
- ಮಾನವ ತಾನು ದೊಡ್ಡವನಾಗದೆ ತನ್ನ ದೇವರನ್ನೂ ದೊಡ್ಡದು ಮಾಡಲಾರ. ನಮ್ಮ ಬಾಳು ದೊಡ್ಡದಾದಷ್ಟೂ ನಮ್ಮ ದೇವರ ಕಲ್ಪನೆ ಭವ್ಯವೂ ದೊಡ್ಡದೂ ಆಗುತ್ತದೆ.
  —ಶಿವರಾಮ ಕಾರಂತ
- ಸಾಕಷ್ಟಿದ್ದರೂ ಸಾಲದೆನ್ನುವವರಿಗೆ ಎಷ್ಟಿದ್ದರೂ ಸಾಲದು.
  —ಎಪಿಕ್ಯೂರಸ್